

ಈಶ್ವರ ಬಡಿಗೇರ

**ಆ ಹಳ್ಳಿಯ ಸೊಬಗಿಗೆ ಮಾರು ಹೋಗಿಯೊ ಏನೊ ಕೃಷ್ಣಮೂರ್ತಿಯವರ ಮಗ ಕಾರ್ತೀಕ ಅಕ್ಕಪಕ್ಕದ ಊರಿನ ತನ್ನ ಸಹಪಾಠಿಗಳಂತೆ ಬೆಂಗಳೂರು, ಚೆನ್ನೈ, ಮುಂಬೈಗೆ ಹೋಗದೆ, ತಾನು ಹೊನ್ನಳ್ಳಿಯಲ್ಲಿಯೇ ಉಳಿಯುತ್ತೇನೆ ಎಂದು ತೀರ್ಮಾನಿಸಿದ್ದ.**

■ **ಜಿ.ವಿ. ಸುಂದರ್**

ಮೈಸೂರು ಪ್ರಾಂತ್ಯಕ್ಕೆ ಮಳೆ ಬರುವುದು ಜೂನ್‌ನಿಂದ ಸೆಪ್ಟೆಂಬರ್ ತಿಂಗಳವರೆಗೆ ಸುಮಾರು ನಾಲ್ಕು ತಿಂಗಳು ಮಾತ್ರ. ಮುಂಗಾರು ಮಳೆ ಅರಬ್ಬೀ ಸಮುದ್ರದಲ್ಲಿ ಹುಟ್ಟಿ, ಪಶ್ಚಿಮ ಘಟ್ಟಗಳಲ್ಲಿ ಅಂದರೆ, ಮಡಿಕೇರಿಯ ಗುಡ್ಡಬೆಟ್ಟ ಗಳಲ್ಲಿ ಧಾರಾಕಾರವಾಗಿ ಸುರಿದು ಅಳಿದುಳಿದ ಸ್ವಲ್ಪ ಮಳೆ ಮೈಸೂರು ಪ್ರಾಂತ್ಯ ದಲ್ಲಿ ಬೀಳುವುದು. ಅದರಿಂದಲೇ ಅಲ್ಲಿನ ಕೆರೆ ಕಟ್ಟೆಗಳು ತುಂಬಿ, ಅಲ್ಲಿನ ರೈತರು ರಾಗಿ, ಜೋಳ, ಹುರುಳಿಯನ್ನು ಬೆಳೆದುಕೊಳ್ಳುವರು. ಅನಂತರ ಮಿಕ್ಕೆಲ್ಲಾ ತಿಂಗಳು ಗಳಲ್ಲಿ ಬರೀ ಒಣ ಹವೆಯೆ. ಹಸಿರು ಒಣಗಿ, ಹೊಲ, ಗದ್ದೆಗಳೆಲ್ಲಾ ಒಣಗಿ ನಿಂತಿರುವುದು ಎಲ್ಲಾ ಕಡೆಯೂ ಬೋಳು ಬೋಳು.

ನಾವು ಬಸ್ಸನ್ನೊ, ಕಾರನ್ನೊ ಹತ್ತಿ, ಮೈಸೂರಿನಿಂದ ಪಶ್ಚಿಮಕ್ಕೆ ಮಡಿಕೇರಿಗೆ ರಾಜ್ಯ ಹೆದ್ದಾರಿ ಎಂಬತ್ತೆಂಟರಲ್ಲಿ ಹೊರಟರೆ, ಹುಣಸೂರು, ಚಿಲ್ಕುಂದ, ಬೈಚಾಪುರ, ಪಿರಿಯಾಪಟ್ಟಣದವರೆಗೆ ಒಣ ಹವೆಯೆ. ಅನಂತರ ಪ್ರತಿ ಹತ್ತು ಹದಿನೈದು ಕಿಲೋಮೀಟರಿಗೆ, ಮುಂಗಾರು ಮಳೆ ಅಧಿಕವಾಗುತ್ತಾ ಹೋಗಿ, ಮರ, ಗಿಡ, ಬಯಲು ತೋಟಗಳ ಹಸಿರು ಹೆಚ್ಚುತ್ತಾ ಹೋಗುತ್ತದೆ. ಕುಶಾಲನಗರ, ಸುಂಟಿಕೊಪ್ಪ ಸೇರುವ ಹೊತ್ತಿಗೆ, ಹಸಿರು ದಟ್ಟವಾಗುತ್ತಾ ಕಾಡು, ಕಾಫಿ ತೋಟಗಳ ರಮ್ಯ ದೃಶ್ಯ ಎದುರಾಗುತ್ತದೆ.

ಪಿರಿಯಾಪಟ್ಟಣ ದಾಟಿ, ಸುಮಾರು ಹನ್ನೆರಡು ಕಿO ಮೀಟರುಗಳ ನಂತರ ಬಲಕ್ಕೆ ಬಹು ಪುರಾತನವಾದ ಭಾರಿ ಧೂಪದ ಮರವೊಂದು ಕಾಣಿಸುತ್ತದೆ. ಅದರ ಪಕ್ಕದಲ್ಲಿ ಬಲಕ್ಕೆ ಸಿಗುವ ರಸ್ತೆಯೊಂದು ಸುತ್ತುತ್ತಾ, ಬಳಸುತ್ತಾ ಸುಮಾರು ಹಳ್ಳಿಗಳನ್ನು ಹಾಯ್ದು ಮುಂದೆ ಅರಕಲುಗೂಡನ್ನು ಸೇರುತ್ತದೆ. ಅದೇ ದಾರಿ ಯಲ್ಲಿ ಮಡಕೇರಿಯ ಹೆದ್ದಾರಿಯಿಂದ, ಆರೇಳು ಕಿಲೋ ಮೀಟರ್ ದೂರದಲ್ಲಿ ಕೃಷ್ಣಮೂರ್ತಿಯವರ ಹಳ್ಳಿ ಸಿಗುತ್ತದೆ. ಸಾಕಷ್ಟು ಮಳೆಯಾಗುವ ಪ್ರದೇಶ. ಹಳ್ಳಿಯ ಪಕ್ಕದಲ್ಲಿ ಯಾರೊ ದಳವಾಯಿ ಕಟ್ಟಿಸಿದ ಕೆರೆ. ಕೆರೆಯ ಅಚ್ಚುಕಟ್ಟಿನಲ್ಲಿ ಬೆಳೆದುನಿಂತ ಭತ್ತ, ಕಬ್ಬಿನ ಗದ್ದೆಗಳು, ಇನ್ನೊಂದು ಕಡೆ ಮಾವು, ತೆಂಗು, ಅಡಿಕೆ ತೋಟಗಳು. ಪಶ್ಚಿಮಕ್ಕೆ ಬೆಟ್ಟಗಳ ಸಾಲು. ಮುಂಜಾವಿನ ಹೊಂಬೆಳಕಿ ನಲ್ಲಿ ಮತ್ತು ಸಂಜೆಯ ಚೆನ್ನದ ತಿಳಿ ಬೆಳಕಿನಲ್ಲಿ ಅಪೂರ್ವವಾಗಿ ಕಾಣುವ ಈ ಹಳ್ಳಿಗೆ ಅನ್ವರ್ಥವಾಗಿ ಹೊನ್ನಹಳ್ಳಿ ಅಥವಾ ಹೊನ್ನಳ್ಳಿ ಎಂದು ಹೆಸರು.

ಆ ಹಳ್ಳಿಯ ಸೊಬಗಿಗೆ ಮಾರು ಹೋಗಿಯೊ ಏನೊ ಕೃಷ್ಣಮೂರ್ತಿಯವರ ಮಗ ಕಾರ್ತೀಕ ಅಕ್ಕಪಕ್ಕದ ಊರಿನ ತನ್ನ ಸಹಪಾಠಿಗಳಂತೆ ಬೆಂಗಳೂರು, ಚೆನ್ನೈ, ಮುಂಬೈಗೆ ಹೋಗದೆ, ತಾನು ಹೊನ್ನಳ್ಳಿಯಲ್ಲಿಯೇ ಉಳಿಯುತ್ತೇನೆ ಎಂದು ತೀರ್ಮಾನಿಸಿದ್ದ. ಕೃಷ್ಣಮೂರ್ತಿ ಗಳು ದೊಡ್ಡ ಮಟ್ಟದ ಹಿಡುವಳಿದಾರರು. ಗದ್ದೆ, ತೋಟಗಳ ಜೊತೆಗೆ ಸಾಕಷ್ಟು ಖುಷ್ಕಿ ಜಮೀನು ಇದೆ. ಕಾರ್ತೀಕ, ಬೆಂಗಳೂರಿನ ಕೃಷಿ ಕಾಲೇಜಿನಲ್ಲಿ ಡಿಗ್ರಿ ಮುಗಿಸಿ, ಎರಡು ವರ್ಷ ಯಾವುದೊ ಬೀಜ ವಿತರಿಸುವ ಕಂಪನಿಗೆ ಸೇರಿ, ದೇಶವೆಲ್ಲಾ ಸುತ್ತಿ, ಮತ್ತೆ ಹೊನ್ನಳ್ಳಿಗೆ ವಾಪಸ್ಸು ಬಂದಿದ್ದ.

ಮಗ ಹಳ್ಳಿಗೆ ವಾಪಸ್ಸು ಬಂದನೆಂಬ ಸಂತಸ ತಂದೆ ತಾಯಿಗಳಿಗೆ ಇದ್ದರೂ, ಅವರ ಒಳಮನಸ್ಸಿನಲ್ಲಿ ಮಗ ಬೆಂಗಳೂರಿನಲ್ಲೊ ಇಲ್ಲಾ ಇನ್ನಾವುದಾದರೂ ದೊಡ್ಡ ನಗರದಲ್ಲಿ ಬ್ಯಾಂಕೊ ಅಥವಾ ದೊಡ್ಡ ಕಂಪನಿಯಲ್ಲಿ